ಇಲಾಖೆ / ವಿಷಯ: DEPARTMENT / SUBJECT: ಸಂಸತ್ತು

ಪತ್ರಿಕೆಯ ಹೆಸರು : NAME OF THE NEWS PAPER : ಉದಯವಾಣಿ ದಿನಾಂಕ : DATE : 19/07/2019

# ಸುಪ್ರೀಂ ತೀರ್ಪಿನ ಬಗ್ಗೆ ಸಂಸತ್ತಲ್ಲೂ ಕ್ರಿಯಾಲೋಪ

ಉದಯ 19/7/19

ನವದೆಹಲಿ: ಕರ್ನಾಟಕದ ವಿಧಾನಸಭಾ ಕಲಾಪದಲ್ಲಿ ಭಾಗಿಯಾಗುವ ವಿವೇಚನಾಧಿಕಾರವನ್ನು 15 ಬಂಡಾಯ ಶಾಸಕರಿಗೆ ಸುಪ್ರೀಂ ಕೋರ್ಟ್ ನೀಡಿರುವುದು ಸಂವಿಧಾನದ ಉಲ್ಲಂಘನೆಯಾಗಿದೆ. ಇದರಿಂದ ಸಂಸತ್ತಿನ ಪರಮಾಧಿಕಾರಕ್ಕೆ ಧಕ್ಕೆ ಬಂದಿದೆ ಎಂದು ರಾಜ್ಯಸಭೆಯಲ್ಲಿ ಕಾಂಗ್ರೆಸ್ ಕ್ರಿಯಾಲೋಪ ತಕರಾರು ಎತ್ತಿದೆ. ಕಾಂಗ್ರೆಸ್‌ನ ರಾಜ್ಯಸಭಾ ಸದಸ್ಯ ಆನಂದ್ ಶರ್ಮಾ ಸಂವಿಧಾನದ 102ನೇ ವಿಧಿ, 191 (2) ಮತ್ತು 10ನೇ ಪರಿಚ್ಛೇದ(ಎಲ್ಲವೂ ಶಾಸಕರ, ಸಂಸದರ ಅನರ್ಹತೆಯನ್ನು ವ್ಯಾಖ್ಯಾನಿಸುವ ಸಂವಿಧಾನದ ಭಾಗ)ವನ್ನು ಉಲ್ಲೇಖಿಸಿ ಕಾನೂನು ಮಾಡುವುದು ವಿಧಾನಸಭೆ ಅಥವಾ ಸಂಸತ್ತಿನ ಅಧಿಕಾರ. ತನ್ನ ಸದಸ್ಯ ಶಾಸಕನನ್ನು ಅನರ್ಹಗೊಳಿಸುವ ಬಗ್ಗೆ 10ನೇ ಪರಿಚ್ಛೇದವು ರಾಜಕೀಯ ಪಕ್ಷಗಳಿಗೆ ಅಧಿಕಾರವನ್ನು ನೀಡಿದೆ. ಪಕ್ಷದ ನಿರ್ದೇಶನಕ್ಕೆ ವಿರುದ್ಧವಾಗಿ ಮತ ಹಾಕುವುದು ಅಥವಾ ಮತ ಚಲಾವಣೆಯಿಂದ ದೂರವಿದ್ದರೆ ಶಾಸಕರನ್ನು ಅನರ್ಹಗೊಳಿಸುವ ಅವಕಾಶವಿದೆ ಎಂದರು. ಆದರೆ ಕ್ರಿಯಾಲೋಪಕ್ಕೆ ಅವಕಾಶ ನೀಡುವುದಿಲ್ಲ ಎಂದು ಸಭಾಪತಿ ವೆಂಕಯ್ಯ ನಾಯ್ಡು ಹೇಳಿದರು.